# ವಿ.ಕ. ಸಂಪಾದಕರ 'ಇಮೋಶನಲ್ ಅತ್ಯಾಚಾರಗಳು'

ಅತಿಹೆಚ್ಚು ಸುಳ್ಳು ಹೇಳುವ ಕನ್ನಡ ದಿನಪತ್ರಿಕೆ ಯಾವುದು? ಸ್ಪರ್ಧೆಯ ಮುಂಚೂಣಿಯಲ್ಲಿ ಉದಯವಾಣಿ (ಮಣಿಪಾಲ ಆವೃತ್ತಿ) ಮತ್ತು ವಿ.ಕ. ಇರುವುದರಿಂದ ನಿಖರವಾಗಿ ಹೇಳುವುದು ಕಷ್ಟ. ಎರಡು ಪತ್ರಿಕೆಗಳ ಸಂಪಾದಕರಲ್ಲಿ ಯಾರು ಹೆಚ್ಚು ಸೋಗಲಾಡಿ? ತನ್ನ ಶಂಖ ತಾನೇ ಹೆಚ್ಚು ಊದಿಕೊಳ್ಳುವ ದಾಸಯ್ಯ ಯಾರು? ಈ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟವೇನಲ್ಲ. ಸ್ಪರ್ಧೆಯ ಕಣದಲ್ಲಿ ವಿ.ಕ. ಸಂಪಾದಕ ಒಬ್ಬರೇ ಇದ್ದಾರೆ. ಇನ್ನೊಂದು ಪತ್ರಿಕೆಗೆ ಸಂಪಾದಕ ಇರುವುದು ಹೆಸರಿಗೆ ಮಾತ್ರ. ವಿ.ಕ. ಸಂಪಾದಕರಿಗೆ ಅವರ ಪತ್ರಿಕೆಯ ಹೆಸರಿನಲ್ಲೇ 'ವಿಜಯ' ಎಂದು ಇರುವುದಕ್ಕೋ ಏನೋ, ಸೋತವರನ್ನು ಕಂಡರೆ ಎಲ್ಲಿಲ್ಲದ ತಿರಸ್ಕಾರ.

ತಮ್ಮ ದೇವರನ್ನು ಪೂಜಿಸದ, ತಮ್ಮ ಹಾಗೆ ಯೋಚಿಸದ "ಅನ್ಯಮತೀಯ"ರ ಕುರಿತ ದ್ವೇಷ ಪ್ರತಿಪಾದನೆಗೆ ಇವರ ಪತ್ರಿಕೆಯೇ ದಿನನಿತ್ಯದ ಕರಪತ್ರ. ಅತ್ಯಧಿಕ ಪ್ರಸಾರದ ಕನ್ನಡ ದಿನಪತ್ರಿಕೆಯನ್ನು ಫ್ಯಾಸಿಸಂನ ಪ್ರಚಾರಕ್ಕೆ ತೆರವು ಮಾಡಿಕೊಡುವುದರ ಜೊತೆ, ಈ ಸಂಪಾದಕರು ಮೊದಲೇ ಸೋತು ನೆಲಕಚ್ಚಿದವರನ್ನು ಮೆಟ್ಟಿ ತುಳಿದು ಗಹಗಹಿಸಿ ನಗುವ ಫ್ಯಾಸಿಸಂನ ಅಮಾನುಷತೆಯನ್ನೂ ಮೈಗೂಡಿಸಿಕೊಂಡಿದ್ದಾರೆ. ಕಳೆದ ಸೆಪ್ಟಂಬರ್ ತಿಂಗಳಲ್ಲಿ ನಡೆದ ಚರ್ಚ್ ದಾಳಿಗಳ ನಂತರ, ಈ ಸಂಪಾದಕ, ಸತತವಾಗಿ ಒಂದು ತಿಂಗಳ ಕಾಲ, ತನ್ನ ಪತ್ರಿಕೆಯಲ್ಲಿ ಕ್ರೈಸ್ತ ಸಮುದಾಯದ ವಿರುದ್ಧ ನಡೆಸಿದ ದ್ವೈವನಿಂದನೆ, ಜನಾಂಗ ನಿಂದನೆ ಮತ್ತು ಅಪಪ್ರಚಾರಗಳ ಅಭಿಯಾನವನ್ನು ನೆನಪಿಸಿಕೊಳ್ಳಿ. ಅನಂತಮೂರ್ತಿ ವಿರುದ್ಧ ವಿಜಯ ಕರ್ನಾಟಕದಲ್ಲಿ ನಡೆದ ಎಸ್‌ಎಂಎಸ್ ವಾಗ್ದಾಳಿಯನ್ನು ನೆನಪಿಸಿಕೊಳ್ಳಿ.


8 ವಿಚಾರ

ಜನಗಳ ಮನ

ರ.ಕೃ. ರೆಡ್ಡಿಯೂ,
ಜ.ರಾ. ಕಲ್ಮನೆಯೂ...

ಪತ್ರಿಕೆಯೊಂದು ತಾನೇ ನಡೆಸುವ ಇಂತಹ ವಾಗ್ವಾದಗಳಲ್ಲಿ ಎದುರಾಳಿ ಅಸಹಾಯಕ ಎಂದು ಗೊತ್ತಿದ್ದೇ ವಿ.ಕ. ಸಂಪಾದಕರು ಅಂತಹವರನ್ನು ನೆಲಕ್ಕೆ ಕೆಡವಿ ಅಟ್ಟಹಾಸದಲ್ಲಿ ನಗುತ್ತಾರೆ. ಈಗ ಈ ಅಲ್ಪನಿಂದ ಇಕ್ಕಿಸಿಕೊಳ್ಳುವ ಸರದಿ ವಿಕ್ರಾಂತ ಕರ್ನಾಟಕ ವಾರಪತ್ರಿಕೆಯ ರವಿಕೃಷ್ಣಾ ರೆಡ್ಡಿಯವರದ್ದು. ಇದೇ ತಾ. 29.3.09 ರ ಭಾನುವಾರದ ವಿ.ಕ. ಸಂಚಿಕೆಯಲ್ಲಿ ಬರುವ ಲೋಕಸಭಾ ಚುನಾವಣೆಯ ಅಭ್ಯರ್ಥಿಯಾಗಿರುವ ಜಗದೀಶ ರಾವ್ ಕಲ್ಮನೆ ಎಂಬ ಅನಿವಾಸಿ ಕನ್ನಡಿಗನ ಹುಂಬತನದ ಬಗ್ಗೆ ಬರೆದಿದ್ದಾರೆ. ಜೊತೆಗೆ ಅವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರು ಜಯನಗರ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ವಿಕ್ರಾಂತ ಕರ್ನಾಟಕ ವಾರಪತ್ರಿಕೆಯ ರವಿಕೃಷ್ಣಾ ರೆಡ್ಡಿಯವರನ್ನೂ ತನ್ನ ಮಾತಿನಲ್ಲಿ ಎಳೆದು ತಂದಿದ್ದಾರೆ. ವಿ.ಕ. ಸಂಪಾದಕರ ಬಾಯಿಯ ತಾಂಬೂಲವಾಗಲು ರವಿಕೃಷ್ಣಾ ರೆಡ್ಡಿ ಮಾಡಿದ್ದಾದರೂ ಏನು?

1. ವಿ.ಕ. ಸಂಪಾದಕರ ಅನುಮತಿ ಇಲ್ಲದೆ ರವಿ ಕೃಷ್ಣಾ ರೆಡ್ಡಿ ಅಮೆರಿಕದಿಂದ ಬೆಂಗಳೂರು ಜಯನಗರದವರೆಗೆ ಬಂದು ಅಲ್ಲಿ ಬಿಜೆಪಿ ಅಭ್ಯರ್ಥಿ ವಿರುದ್ಧ ಸ್ಪರ್ಧಿಸಿದ್ದು
2. ಚುನಾವಣೆಯ ವೆಚ್ಚಕ್ಕೆಂದು ರವಿಕೃಷ್ಣಾ ರೆಡ್ಡಿ ತನ್ನ ಸ್ನೇಹಿತರಿಂದ ಸಂಗ್ರಹಿಸಿದ 4.20 ಲಕ್ಷ ರೂಪಾಯಿಯ ಲೆಕ್ಕವನ್ನು ವಿ.ಕ. ಸಂಪಾದಕರಿಗೆ ಕೊಡದೆ ಇದ್ದದು.
3. ಆ ಚುನಾವಣೆಯಲ್ಲಿ ರವಿಕೃಷ್ಣಾ ರೆಡ್ಡಿ 'ಎರಡೂ ನೂರು ಚಿಲ್ಲರೆ' ಮತಗಳನ್ನು ಪಡೆದುಕೊಂಡದ್ದು.

ಈ 'ಅಪರಾಧಗಳ ಪೈಕಿ, ಮೊದಲ ಎರಡಕ್ಕೆ ರವಿಕೃಷ್ಣಾ ರೆಡ್ಡಿ ಚುನಾವಣೆ ಆಯೋಗಕ್ಕೆ ಮಾತ್ರ ಉತ್ತರದಾಯಿ. ಉಳಿದವರಿಗೆ ಅವರಿಗೆ ವಿವರಣೆ ನೀಡಬೇಕಾದ ಆಗತ್ಯವಿಲ್ಲ. ವಿ.ಕ. ಸಂಪಾದಕರ ಪ್ರಕಾರ ರವಿಕೃಷ್ಣಾ ರೆಡ್ಡಿ ಜಯನಗರ ಕ್ಷೇತ್ರದಲ್ಲಿ 200 ಚಿಲ್ಲರೆ ಮತ ಪಡೆದುಕೊಂಡು ತನ್ನ ಡಿಪಾಜಿಟ್ಟಿನ ಜೊತೆಗೆ ಮಾನವನ್ನೂ ಕಳೆದುಕೊಂಡಿದ್ದಾರೆ. ಆದರೆ ಚುನಾವಣೆಯ ಈ ಲೆಕ್ಕಾಚಾರದಲ್ಲಿ ನಿಜಕ್ಕೂ ಮಾನಗೆಟ್ಟವರು ಯಾರು? ರವಿಕೃಷ್ಣಾ ರೆಡ್ಡಿಯೋ, ಜಯನಗರದ ಸುಶಿಕ್ಷಿತ ಮತದಾರ–ಅಥವಾ ವಿ.ಕ. ಸಂಪಾದಕರೋ? ಆ ಕ್ಷೇತ್ರದಲ್ಲಿ ರವಿಕೃಷ್ಣಾ ರೆಡ್ಡಿಗೆ ಪ್ರತಿದ್ವಂದ್ವಿಗಳಾಗಿದ್ದ ಎರಡು ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ಕೋಟಿಗಟ್ಟಲೆ ಹಣ ಖರ್ಚು ಮಾಡಿ, ಅವರಲ್ಲಿ ಒಬ್ಬ ಗೆದ್ದಿದ್ದಾನೆ. ಅವನು ಮಾನಬಿಟ್ಟವನು ಅಥವಾ ಹಾಸ್ಯಾಸ್ಪದ ಮನುಷ್ಯ ಎಂದು ವಿ.ಕ. ಸಂಪಾದಕರಿಗೆ ಖಂಡಿತ ಅನ್ನಿಸಿರಲಿಕ್ಕಿಲ್ಲ. ಯಾಕೆಂದರೆ ಗೆದ್ದವರನ್ನು ಆರಾಧಿಸುವುದು ಹಾಗೂ ಸೋತವರನ್ನು ತಿರಸ್ಕಾರದಲ್ಲಿ ತುಳಿಯುವುದು ವಿ.ಕ. ಪತ್ರಿಕೆಯ ವೃತ್ತಿಮೌಲ್ಯ.



ಆ ಚುನಾವಣೆಗಳಲ್ಲಿ ತಾನು ಯಾಕೆ ಸ್ಪರ್ಧಿಸುತ್ತಿದ್ದೇನೆ ಎಂದು ತನಗೆ ಗೊತ್ತಿರುವ ಎಲ್ಲರಿಗೂ ರವಿಕೃಷ್ಣಾ ರೆಡ್ಡಿ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದರು. ಅವರ ಈ ಪ್ರಯತ್ನದಲ್ಲಿ ಪ್ರಾಮಾಣಿಕತೆಯೂ ಇತ್ತು; ಆರ್ತತೆಯೂ ಇತ್ತು. ತನ್ನ ಚುನಾವಣಾ ಪ್ರಚಾರಕ್ಕೆ ಅವರು ಲಭ್ಯವಿರುವ ಎಲ್ಲ ನ್ಯಾಯಯುತ ಹಾಗೂ ಗೌರವಯುತ ಮಾರ್ಗಗಳನ್ನೂ ಅನುಸರಿಸಿದರು. ವಿ.ಕ. ಸಂಪಾದಕರನ್ನು ಭೇಟಿ ಮಾಡಿದ್ದೂ ಚುನಾವಣಾ ಪ್ರಚಾರದ ಅಂತಹ ಒಂದು ಗೌರವಯುತ ವಿಧಾನವಾಗಿತ್ತು. ವಿ.ಕ. ಸಂಪಾದಕ ಈಗ ಅದನ್ನೇ ಆಡಿಕೊಂಡು ನಗುತ್ತಿದ್ದಾರೆ! ನಗಬೇಕಾದ್ದೆ. ದಿ. ಲಂಕೇಶ್ ಹೇಳುತ್ತಿದ್ದ ಹಾಗೆ "ದಗಾಕೋರರ ಜಗತ್ತಿನಲ್ಲಿ ಪ್ರಾಮಾಣಿಕನಾಗಿರುವುದು ಮೂರ್ಖತನ." (ಆದರೆ ತನ್ನ ಈ ಮಾತಿಗೆ ಮೊದಲು ಅವರು "ಪ್ರಾಮಾಣಿಕರ ಜಗತ್ತಿನಲ್ಲಿ ದಗಾಕೋರನಾಗಿರುವುದು ಅನೈತಿಕ" ಎಂದೂ ಹೇಳಿದ್ದರು).

**● ಜಿ. ರಾಜಶೇಖರ**



ರವಿಕೃಷ್ಣಾ ರೆಡ್ಡಿ ಮತ್ತು ಜಗದೀಶ್ ರಾವ್ ಕಲ್ಮನೆ ಹುಂಬರೇ ಇರಬಹುದು. ಆದರೆ ಚುನಾವಣೆಗೆ ನಿಂತು ಸೋಲುವುದು ಅಪರಾಧವಲ್ಲ; ಅತ್ಯಂತ ಕಡಿಮೆ ಮತಗಳನ್ನು ಪಡೆಯುವುದೂ ಅಪರಾಧವಲ್ಲ. ಚುನಾವಣೆಯಲ್ಲಿ ಗಳಿಸಿದ ಮತಗಳಿಂದ ಅಭ್ಯರ್ಥಿಗಳ ಯೋಗ್ಯತೆ ಅಳೆಯುವುದಂತೂ ಮೂರ್ಖತನವೇ ಸರಿ. ಹಿಂದೆ ಬೆಂಗಳೂರಿನಿಂದ ಲೋಕಸಭೆಗೆ ಸ್ಪರ್ಧಿಸಿದ್ದ ಕವಿ ಗೋಪಾಲ ಕೃಷ್ಣ ಅಡಿಗ ಮತ್ತು ಉತ್ತರ ಕನ್ನಡ ಕ್ಷೇತ್ರದಿಂದ ಸ್ಪರ್ಧಿಸಿದ್ದ ಶಿವರಾಮ ಕಾರಂತ, ಇಬ್ಬರೂ ಭಾರೀ ಅಂತರದಲ್ಲಿ ಸೋತಿದ್ದರು. ಶಿವರಾಮ ಕಾರಂತರಂತೂ ಅವರ ನಂತರದ ಪ್ರತಿಸ್ಪರ್ಧಿ ಚಲನಚಿತ್ರ ನಟ ಅನಂತನಾಗ್ ಅವರಿಗಿಂತಲೂ ಕಡಿಮೆ ಮತ ಪೆಡದುಕೊಂಡು ಮೂರನೆಯ ಸ್ಥಾನದಲ್ಲಿದ್ದರು. ಹಾಗೆಂದು ವಿ.ಕ. ಸಂಪಾದಕರು ಕನ್ನಡದ ಆ ಇಬ್ಬರು ಧೀಮಂತರ ಮುಖಕ್ಕೂ ಮಂಗಳಾರತಿ ಮಾಡುವವರೋ?

ವಿ.ಕ. ಸಂಪಾದಕರ ಪ್ರಕಾರ ರವಿಕೃಷ್ಣಾ ರೆಡ್ಡಿ ಮತ್ತು ಜಗದೀಶರಾವ್ ಕಲ್ಮನೆ 'ಲೂಸು'ಗಳು ಹಾಗೂ ಅವರಿಬ್ಬರಿಂದ ವಿ.ಕ. ಪತ್ರಿಕಾ ಸಿಬ್ಬಂದಿ ಸಖತ್ತು ಮನರಂಜನೆ ಪಡೆದುಕೊಂಡಿದೆ. ಚುನಾವಣೆಗಳನ್ನು ಗೆಲ್ಲುವುದಕ್ಕಾಗಿ ಜನರನ್ನು ಕೊಲ್ಲಲು ಹಿಂದೆಮುಂದೆ ಯೋಚಿಸದ ಮೋದಿ, ಅಧ್ವಾಣಿ ವಗೈರೆಗಳು ಆ ಪತ್ರಿಕೆಯ ಹೀರೋಗಳಾಗಿರುವುದರಿಂದ ವಿ.ಕ.ದ ಸಂಪಾದಕ ಮತ್ತು ಅವರ ಸಿಬ್ಬಂದಿಗೆ ಮನರಂಜನೆ ಒದಗಿಸುವ ಚಟುವಟಿಕೆಗಳ ಕುರಿತು ಯೋಚಿಸಲೂ ಭಯವಾಗುತ್ತದೆ. ವಿ.ಕ. ಸಂಪಾದಕರು ಲೂಸೂ ಅಲ್ಲ, ಮೆಂಟಲ್ ಕೇಸು ಕೂಡ ಅಲ್ಲ ಎಂದೇ ಇಟ್ಟುಕೊಂಡರೂ ಅವರ ಪತ್ರಿಕೆಯಿಂದ ನಮ್ಮಂತಹವರು ಪಡೆಯುವ ಮನರಂಜನೆಯ ಬಗ್ಗೆ ಪ್ರಾಯಶಃ ಅವರಿಗೆ ಗೊತ್ತಿಲ್ಲ. ವಿ.ಕ. ಪ್ರತಿನಿತ್ಯ ಕೋಮುದ್ವೇಷದ ವಿಷವನ್ನು ಎಂತಹ ಹಾಸ್ಯಾಸ್ಪದ ಸುಳ್ಳುಗಳ ಜೊತೆ ಬೆರೆಸಿ, ತನ್ನ ಓದುಗರಿಗೆ ಉಣಬಡಿಸುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆ, ವಿ.ಕ. ಸಂಪಾದಕರ ಮೇಲೆ ಹೇಳಿದ ಹೀನ ಅಭಿರುಚಿಯ ಬರಹ ಪ್ರಕಟವಾದ ದಿನ, ಅದೇ ಸಂಚಿಕೆಯ ಇನ್ನೊಂದು ಪುಟದಲ್ಲಿ (ಮಂಗಳೂರು ಆವೃತ್ತಿಯ ಪುಟ 2) ಪ್ರಕಟವಾಗಿರುವ ಈ ವರದಿಯಲ್ಲಿದೆ. ವಿ.ಕ.ದ ಹಸಿಸುಳ್ಳು (ಈ ಘಟನೆಯನ್ನು ವರದಿ ಮಾಡಿದ ಉದಯವಾಣಿಯೂ ಈ ಸುಳ್ಳನ್ನು ರಿಪೀಟ್ ಮಾಡಿದೆ) ಸುದ್ದಿ ಶೀರ್ಷಿಕೆಯಿಂದಲೇ ಪ್ರಾರಂಭವಾಗುತ್ತದೆ. "ಗೋಸಾಗಾಟ ವೇಳೆ ಅಪಘಾತ" ಎಂಬ ಸುದ್ದಿ ಶೀರ್ಷಿಕೆಯ ಈ ಅಪಘಾತವನ್ನು 'ಫಿಕ್ಸ್' ಮಾಡಿದವರು ಕುಂದಾಪುರ ಪೊಲೀಸು ಠಾಣೆಯವರು. ಈ ಪೊಲೀಸು ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಕುಂದಾಪುರದ ಐಸ್‌ಕ್ರೀಮ್ ಪಾರ್ಲರ್ ಒಂದರಲ್ಲಿ ಕೆಲವು ದಿನಗಳ ಕೆಳಗೆ ಹಿಂದೂ ಹುಡುಗಿಯರ ಜೊತೆ ಐಸ್‌ಕ್ರೀಮ್ ತಿಂದ ತಪ್ಪಿಗೆ ಮುಸ್ಲಿಮ್ ವಿದ್ಯಾರ್ಥಿಗಳನ್ನು ಠಾಣೆಗೆ ಎಳೆದುಕೊಂಡು ಹೋಗಿ ಬಾರಿಸಿದ್ದ. ಗೋಸಾಗಾಟದ ಬಗೆಗಿನ ಮೇಲೆ ಹೇಳಿದ ವಿ.ಕ. ವರದಿಯಲ್ಲಿ ಹೀಗೆ ಕಾಣಿಸಲಾಗಿದೆ. "ಕುಂದಾಪುರ ವಕ್ವಾಡಿ ಪರಿಸರದಲ್ಲಿ ಜಾನುವಾರು ಕದ್ದು ಪಿಕ್‌ಅಪ್ ಮಿನಿ ಗೂಡ್ಸ್ ಟೆಂಪೊವೊಂದರಲ್ಲಿ ಹಿಂಸಾತ್ಮಕ ರೂಪದಲ್ಲಿ ತುಂಬಿಕೊಂಡು ಸಾಗುತ್ತಿದ್ದ ನಾಲ್ವರನ್ನು ಕುಂದಾಪುರ ಪೊಲೀಸರು ಶನಿವಾರ ಬೆಳಗ್ಗಿನ ಜಾವ ಬಂಧಿಸಿದ್ದಾರೆ. ಜಾನುವಾರ ಸಾಗಾಟದ ಸಂದರ್ಭದಲ್ಲಿ ಅಪಘಾತ ಸಂಭವಿಸಿದ್ದೇ ಪ್ರಕರಣ ಬೆಳಕಿಗೆ ಬರಲು ಕಾರಣವಾಯಿತು."

> ತಮ್ಮ ದೇವರನ್ನು ಪೂಜಿಸದ, ತಮ್ಮ ಹಾಗೆ ಯೋಚಿಸದ "ಅನ್ಯಮತೀಯ"ರ ಕುರಿತ ದ್ವೇಷ ಪ್ರತಿಪಾದನೆಗೆ ವಿ.ಕ. ಪತ್ರಿಕೆಯೇ ದಿನನಿತ್ಯದ ಕರಪತ್ರ. ಅತ್ಯಧಿಕ ಪ್ರಸಾರದ ಕನ್ನಡ ದಿನಪತ್ರಿಕೆಯನ್ನು ಫ್ಯಾಸಿಸಂನ ಪ್ರಚಾರಕ್ಕೆ ತೆರವು ಮಾಡಿಕೊಡುವುದರ ಜೊತೆ, ಈ ಪತ್ರಿಕೆಯ ಸಂಪಾದಕರು ಮೊದಲೇ ಸೋತು ನೆಲಕಚ್ಚಿದವರನ್ನು ಮೆಟ್ಟಿ ತುಳಿದು ಗಹಗಹಿಸಿ ನಗುವ ಫ್ಯಾಸಿಸಂನ ಅಮಾನುಷತೆಯನ್ನೂ ಮೈಗೂಡಿಸಿಕೊಂಡಿದ್ದಾರೆ.

ವಾಸ್ತವವಾಗಿ ಈ ವರದಿಯಲ್ಲಿ ಗಾಯಾಳುಗಳು ಎಂದು ಹೆಸರಿಸಲಾದ ಮಂಗಳೂರಿನ ನಜೀರ್ (30) ಹಾಗೂ ಮಹ್ಮದ್ ಹಸನ್ (48) ಜಾನುವಾರು ಕಳ್ಳರಲ್ಲ. ಅವರು ಹಲವು ವರ್ಷಗಳಿಂದ ಜಾನುವಾರು ವ್ಯಾಪಾರ ಮಾಡುತ್ತಿದ್ದು ಕುಂದಾಪುರದ ಆಸುಪಾಸಿನ ಹಳ್ಳಿಗಳ ದಲ್ಲಾಳಿಗಳಿಂದ ಜಾನುವಾರು ಖರೀದಿಸಿ, ಮಂಗಳೂರಿಗೆ ಸಾಗಿಸುವುದು ಅವರ ಉದ್ಯೋಗವಾಗಿತ್ತು. ಮೊನ್ನೆ ತಾ. 28.3.09 ರ ರಾತ್ರಿ ಅವರು ಕುಂದಾಪುರದ ವಕ್ವಾಡಿ ಮತ್ತು ಅದರ ಅಕ್ಕಪಕ್ಕದ ಹಳ್ಳಿಗಳ ದಲ್ಲಾಳಿಗಳಿಂದ 11 ಜಾನುವಾರುಗಳನ್ನು ಕ್ರಯಕ್ಕೆ ತೆಗೆದುಕೊಂಡು ತಮ್ಮ ಮಹೀಂದ್ರ ಪಿಕ್‌ಅಪ್ ವಾಹನದಲ್ಲಿ ಸಾಗಾಟ ಮಾಡುತ್ತಿದ್ದರು. ಆದರೆ ಅವರಿಗೆ ಜಾನುವಾರು ಮಾರಿದ ಒಬ್ಬ ಆಸಾಮಿಯೇ ಕುಂದಾಪುರದ ಭಜರಂಗಿಗಳಿಗೂ ಸುದ್ದಿ ಮುಟ್ಟಿಸಿದ್ದಾರೆ (ಆದಿ ಉಡುಪಿ ಬೆತ್ತಲೆ ಪ್ರಕರಣದಲ್ಲೂ ಹೀಗೇ ಆಗಿತ್ತು). ಸುಮಾರು ನೂರರಷ್ಟಿದ್ದ ಈ ಭಜರಂಗಿಗಳ ಗುಂಪು ನಜೀರ್ ಮತ್ತು ಹಸನ್‌ರ ವಾಹನವನ್ನು ತಡೆದು ಒಳಗಿದ್ದವರಿಗೆ ಮಾರಣಾಂತಿಕವಾಗಿ ಥಳಿಸಿ ಅವರ ಬಳಿ ಇದ್ದ 25,000 ರೂ. ನಗದು, ವಾಚು ಮತ್ತು ಮೊಬೈಲು ಫೋನುಗಳನ್ನು ದೋಚಿದೆ. ನಜೀರ್ ಅವರ ಎರಡೂ ಕಾಲುಗಳ ಎಲುಬು ತುಂಡಾಗಿದೆ; ಹಸನ್ ಅವರ ಮುಖದ ಎಲುಬು ಜಖಂ ಆಗಿದ್ದು ಮೂಗಿನ ಎಲುಬು ಮುರಿದಿದೆ. ಇಬ್ಬರಿಗೂ ಮೈಮೇಲೆಲ್ಲ ಹೊಡೆತ ಬಿದ್ದಿದೆ.

ಆದರೆ ಕುಂದಾಪುರ ಪೊಲೀಸರು ಹಾಗೂ ಭಜರಂಗಿಗಳ ಜೊತೆ ಶಾಮೀಲಾಗಿ ವಿ.ಕ. ಮತ್ತಿತರ ಪತ್ರಿಕೆಗಳು ಈ ಸತ್ಯಸಂಗತಿಯನ್ನು ಓದುಗರಿಂದ ಮುಚ್ಚಿಟ್ಟು, ರಸ್ತೆ ಅಪಘಾತ ಮತ್ತು ಜಾನುವಾರು ಕಳ್ಳತನಗಳ ಕಟ್ಟುಕತೆಯನ್ನು ವರದಿ ಎಂಬಂತೆ ಪ್ರಕಟಿಸಿವೆ. ವಿ.ಕ., ಉದಯವಾಣಿ ಮತ್ತು ಇತರ ಪತ್ರಿಕೆಗಳು ಜಾನುವಾರು ಕಳ್ಳತನದ ಈ ಬಗೆಯ ಸುಳ್ಳು ಸುದ್ದಿಗಳನ್ನು ಒಂದು ಅನಿಯಮಿತ ಸೀರಿಯಲ್‌ನಂತೆ ಮೇಲಿನಿಂದ ಮೇಲೆ ಪ್ರಕಟಿಸುತ್ತಲೇ ಇರುತ್ತವೆ. "ಮುಸ್ಲಿಮ್ ವ್ಯಾಪಾರಿಗಳು ಸಾಗಿಸುವ ಜಾನುವಾರುಗಳೆಲ್ಲವೂ ಅವರು ಕದ್ದಿರುವುದೇ ಹೊರತು ಕ್ರಯಕೊಟ್ಟು ರೈತರಿಂದ ಪಡೆದುಕೊಂಡಿರುವಂತಹವಲ್ಲ ಹಾಗೂ ರೈತರು, ಅದರಲ್ಲೂ ಹಿಂದೂ ರೈತರು ತಮ್ಮ ಗೊಡ್ಡು ಹಸು ಎಮ್ಮೆಗಳನ್ನು, ಮುದಿ ಮತ್ತು ಕೋಣಗಳನ್ನು ಮಾರುವುದೇ ಇಲ್ಲ" ಎಂಬ ಹಸಿ ಸುಳ್ಳನ್ನು ಕರಾವಳಿಯ ಭಜರಂಗಿಗಳ ಜೊತೆ ಇಲ್ಲಿನ ಮಠಾಧೀಶರು, ಪತ್ರಿಕೆಗಳು ಮತ್ತು ಪೊಲೀಸರು ದನಿಗೂಡಿಸಿ ಜನರ ಕಾಮನ್‌ಸೆನ್ಸ್ ಆಗುವಂತೆ ಮಾಡಿದ್ದಾರೆ. ಹಾಗಾಗಿ ಗೋರಕ್ಷಣೆಯ ಹೆಸರಿನಲ್ಲಿ ಕರಾವಳಿಯಲ್ಲಿ ಎಂತಹ ಅಮಾನುಷ ಹಿಂಸೆ ನಡೆದರೂ ಪೊಲೀಸರು ಅಪರಾಧಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಿಲ್ಲ, ಪತ್ರಿಕೆಗಳು ಅಂತಹ ಘಟನೆಗಳ ಕ್ರಿಮಿನಲ್ ಸ್ವರೂಪವನ್ನು ಕಾಣಿಸುವುದೇ ಇಲ್ಲ.

ವಿ.ಕ. ಸಂಪಾದಕರಂತೂ ಹಿಂದೂ ವೀರರ ಈ ಬಗೆಯ ಹಿಂಸಾಚಾರವನ್ನು ಸಮರ್ಥಿಸುವ ಲೆಕ್ಕಣಿಕೆ ವೀರ. ಅವರಷ್ಟು ಹಾಸ್ಯಾಸ್ಪದ ವ್ಯಕ್ತಿ ಬೇರೆ ಯಾರಿದ್ದಾರು? ■

---

## ಹಾಯ್ಕು
ಜುಗಲ್‌ಬಂದಿ

**ಸಾವು-1**

ಅಶಾಶ್ವತತೆ
ಬದುಕು
ಶಾಶ್ವತತೆ ಸಾವು......

ಮನದ ಹರೆಯ
ಬದುಕಿನ ಹೋಳಿ
ಸಾವನ್ನು ಕೊಚ್ಚಿ ಸಾಗುತ್ತದೆ

ಅವಳ ಕಣಕಣದಲ್ಲಿ
ಬದುಕು ಅರಳುತ್ತದೆ
ಸಾವು ಸೋಲುತ್ತದೆ

ಬದುಕಿನ ಹನಿಗಳು
ಸಾವಿನ ಪಾತ್ರೆಯನ್ನು
ತುಂಬುತ್ತಿವೆ

ಇನಿಯಳ ತೋಳ್ತೆಕ್ಕೆಯಲ್ಲಿ
ಸಾವು
ಬದುಕುತ್ತದೆ

● ಡಾ. ಸಿ. ರವೀಂದ್ರನಾಥ್, ಮೈಸೂರು



**ಸಾವು-2**

ಮೊದಲ ಮಳೆಯ ದಿನ
ನಿನ್ನ ಸಾವು
ಮರುಹುಟ್ಟಿನ ಸಾಕ್ಷಿ

ಜೀವಂತವಾಗಿ ಇರುವವರಿಗೆ
ಬದುಕಿನೊಂದು
ಸತ್ಯದ ಅನಾವರಣ; ಸಾವು

ಸಾವಿಗೆದುರಾಗಿ
ಗೆದ್ದವರುಂಟೆ
ಪ್ರೀತಿಯ ವಿನಹ?

ಸಾವು ನಮ್ಮೊಳಗೆ ಕರಗುತ್ತದೆ
ಪ್ರೀತಿಯಾಗಿ
ರೂಪ ಪಡೆಯುತ್ತದೆ

ನನ್ನ ಭಯ ಸಾವಲ್ಲ
ಕನಸುಗಳ ಕಟ್ಟದೆಯೆ
ಕಳೆವ ಬದುಕು

● ಜ.ನಾ. ತೇಜಶ್ರೀ, ಹಾಸನ

(ಹೈಕು ಕವಿ ಡಾ. ರವಿ ಮತ್ತು ಯುವ ಕವಯಿತ್ರಿ ತೇಜಶ್ರೀ ಸಾವನ್ನು ಕುರಿತು ಬರೆದಿರುವ ಹೈಕುಗಳ ಜುಗಲ್‌ಬಂದಿ ಇದು)